ಪ್ರಾರಂಭವಾಗಿದೆ. ಅದಕ್ಕಾಗಿ ಪಿಡಬ್ಲ್ಯೂಡಿ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ. ಆದರೆ ಮುಖ್ಯವಾಗಿ ತಮ್ಮ ತುಮಕೂರು ಹೊನ್ನಾವರ 186ನೇ ಮೈಲಿಗಲ್ಲು ಮಾಧವಚಾರಿ ಸರ್ಕಲ್‌ನಲ್ಲಿ ಊರಿನ ಮಧ್ಯೆ ಇರತಕ್ಕಂತಹ 150 ವರ್ಷದ ಓಲ್ಡ್ ಬ್ರಿಡ್ಜ್ ಆ ಬ್ರಿಡ್ಜ್‌ನ ಮುಖಾಂತರ ವಿಐಎಸ್‌ಎಲ್ ಮತ್ತು ಎಂಪಿಎಂ ಕಾಗದ ಕಾರ್ಖಾನೆಯು ಮತ್ತು ವಿಐಎಸ್‌ಎಲ್ ಕಬ್ಬಿಣ ಕಾರ್ಖಾನೆಗೆ ಸುಮಾರು ಸಾವಿರಾರು ವೆಹಿಕಲ್‌ಗಳು ಓಡಾಡುತ್ತವೆ. ದಯವಿಟ್ಟು ಇದನ್ನು ಪಿಡಬ್ಲ್ಯೂಡಿ ಸಚಿವರು ಗಮನ ಹರಿಸಿ ಅದಷ್ಟು ಬೇಗನೇ ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಬ್ರಿಡ್ಜ್‌ಗೆ 5 ಕೋಟಿ ರೂಪಾಯಿಗಳ ಪ್ರಸ್ತಾವನೆ ಸರ್ಕಾರದಲ್ಲಿದೆ ಎಂದು ಹೇಳಿದ್ದಾರೆ. ಈ ಐದು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಸುಮಾರು 12–13 ಕೋಟಿ ರೂಪಾಯಿಗಳ ಎಷ್ಟಿಮೇಟ್‌ನ್ನು ಇಂಜಿನಿಯರ್‌ರವರು ಮಾಡಿಕೊಟ್ಟಿದ್ದಾರೆ. ದಯವಿಟ್ಟು ನಮ್ಮ ಸಚಿವರು ಆ ಬಗ್ಗೆ ಗಮನವನ್ನು ಹರಿಸಿ ನನ್ನ ಕ್ಷೇತ್ರ, ವ್ಯಾಪ್ತಿಗೆ ಬರುವಂತಹ 2 ಬ್ರಿಡ್ಜ್‌ಗಳ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭ ಮಾಡುವುದಕ್ಕೆ ಯಾವ ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕೆಂದು ತಮ್ಮ ಮುಖಾಂತರ ನಮ್ಮ ಪಿಡಬ್ಲ್ಯೂಡಿ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರವು ನಮ್ಮ ಗಮನಕ್ಕೆ ಬಂದಿದೆ. ಆ ಕಾರಣದಿಂದ ಕೆಆರ್‌ಡಿಸಿಎಲ್‌ನವರಲ್ಲಿ ಪ್ರಸ್ತಾವನೆಯನ್ನು ಮಂಡಿಸಿರುವುದು ಅತೀ ಶೀಘ್ರದಲ್ಲಿಯೇ ಸೇತುವೆ ನಿರ್ಮಾಣಕ್ಕೆ ಬೇಕಾಗಿರುವಂತಹ ಒಂದು ಟೆಂಡರ್‌ನ್ನು ಕರೆದು ವ್ಯವಸ್ಥೆ ಮಾಡಲಾಗುವುದು ಎಂಬ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಕೆ.ಸಂಗಮೇಶ್ವರ: ಪಿಡಬ್ಲ್ಯೂಡಿ ಕಾರ್ಯದರ್ಶಿಯವರನ್ನು ಮತ್ತು ಪಿಡಬ್ಲ್ಯೂಡಿ ಮಂತ್ರಿಯವರನ್ನು ಕೇಳಿ ಎಂದು ಹೇಳಿದ್ದಾರೆ. ದಯಮಾಡಿ ನಮ್ಮ ಬಗ್ಗೆ ಸ್ವಲ್ಪ ಅನುಕಂಪ ಇಟ್ಟು ಅದನ್ನು ಮಾಡಿಕೊಡಲಿ ಎಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಇದು ಒಂದು ಅತ್ಯಂತ ಪ್ರಮುಖವಾದಂಥ ಸೇತುವೆ ಎಂದು ನಮಗೆ ಗೊತ್ತಿದೆ. ಒಂದು ವೇಳೆ ಅಲ್ಲಿ ಸೇತುವೆ ಬಿದ್ದುಹೋದರೆ ಸಂಪರ್ಕ ರದ್ದಾದರೆ ಬಹಳಷ್ಟು ಸಮಸ್ಯೆಗಳು ಆಗಬಹುದು ಎಂದು ನನ್ನ ಗಮನಕ್ಕೆ ಬಂದಿದೆ. ನಾನು ಮೊನ್ನೆ ಸ್ವತ: ಅಲ್ಲಿಗೆ ಹೋಗಿದ್ದಾಗ ಆ ಸೇತುವೆಯನ್ನು ನೋಡಿಕೊಂಡು ಬಂದಿದ್ದೇನೆ. ಅದರ ಬಗ್ಗೆ ಶೀಘ್ರದಲ್ಲಿಯೇ ಕ್ರಮವನ್ನು ಕೈಗೊಳ್ಳುತ್ತೇನೆ.

ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ನಿರ್ಮಾಣದ ಬಗ್ಗೆ

58(487) ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ಬೆಂಗಳೂರು–ಮಾಗಡಿ ಮುಖ್ಯ ರಸ್ತೆಯ ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ನಿರ್ಮಾಣಕ್ಕೆ ಅಂದಾಜಿಸಿರುವ ಮೊತ್ತವೆಷ್ಟು;

ಈ ಸೇತುವೆ ನಿರ್ಮಾಣವನ್ನು ಕೆ.ಆರ್.ಡಿ.ಸಿ.ಎಲ್.ನ ಮೂರನೇ ಹಂತದ ಯೋಜನೆಯಲ್ಲಿ ರೂ.313.12 ಲಕ್ಷಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲಾಗಿದೆ.

ಆ) ಈ ಕಾಮಗಾರಿಯನ್ನು ಎಷ್ಟು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕಾಗಿತ್ತು;

ಈ ಸೇತುವೆಯ ಕಾಮಗಾರಿಯನ್ನು ಮೂರನೇ ಹಂತದ ಪ್ಯಾಕೇಜ್–3ರ ಅಡಿಯಲ್ಲಿ ವಹಿಸಲಾಗಿದ್ದು, ಪ್ಯಾಕೇಜಿನ ಗುತ್ತಿಗೆ ಅವಧಿಯು ಮೂರು ವರ್ಷದ್ದಾಗಿರುತ್ತದೆ. ಗುತ್ತಿಗೆ ಕರಾರಿನ ಪ್ರಕಾರ ಈ ಪ್ಯಾಕೇಜಿನ ಎಲ್ಲಾ ಸೇತುವೆ ಕಾಮಗಾರಿಗಳನ್ನು ಆಗಸ್ಟ್ 2009 ರಲ್ಲಿ ಪೂರ್ಣಗೊಳಿಸಬೇಕಾಗಿದೆ.

ಇ) ಇನ್ನು ಪೂರ್ಣಗೊಳ್ಳದೆ ಇರಲು ಕಾರಣಗಳೇನು;

ಈ ಸೇತುವೆಯ ನಿರ್ಮಾಣವು ಜುಲೈ 2008 ರಲ್ಲಿ ಪೂರ್ಣಗೊಂಡಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆಯವರಿಂದ ಭೂಮಿಯನ್ನು ಹಸ್ತಾಂತರಿಸುವಲ್ಲಿ ಆದ ವಿಳಂಬದಿಂದ ಕೂಡು ರಸ್ತೆಯ ನಿರ್ಮಾಣವು ಪೂರ್ಣಗೊಂಡಿರುವುದಿಲ್ಲ.

ಈ) ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

ಕೂಡು ರಸ್ತೆ ನಿರ್ಮಾಣ ಪ್ರಾರಂಭವಾಗಿದ್ದು, ಕಾಮಗಾರಿಯನ್ನು ಅಕ್ಟೋಬರ್ 2009 ರಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ, ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ಬಹುಶ: ಬೆಂಗಳೂರು–ಮಾಗಡಿ ಸಂಪರ್ಕಕ್ಕೆ ಬಹಳ ಅತ್ಯಾವಶ್ಯಕವಾಗಿರುವಂತಹ ಸೇತುವೆಯಾಗಿದೆ. ಬಹಳ ಹಳೆಯಾದಂತಹ ಸುಮಾರು 70–80 ವರ್ಷಗಳ ಹಿಂದೆ ಕಟ್ಟಿರುವಂತಹ ಸೇತುವೆಯಾಗಿದೆ. ಮಾನ್ಯ ಮಂತ್ರಿಗಳು ಸಹ ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟಿದ್ದಾರೆ. ಅನೇಕ ಅಪಘಾತಗಳು ಕೂಡ ಈ ಸೇತುವೆಯಲ್ಲಿ ಆಗಿದೆ. ಸನ್ಮಾನ್ಯ ರೇವಣ್ಣನವರು ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 3 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸ ಸೇತುವೆಯನ್ನು ನಿರ್ಮಾಣ ಮಾಡಬೇಕೆಂಬ ಕೆಲಸವನ್ನು ಪ್ರಾರಂಭ ಮಾಡಿದರು. 2009ರಲ್ಲಿ ಆಗಸ್ಟ್‌ನಲ್ಲಿಯೇ ಮುಗಿಸುತ್ತೇವೆನ್ನುವಂತಹ ಮಾತನ್ನು ಮಾನ್ಯ ಮಂತ್ರಿಗಳು ಸೇತುವೆಯ ಬಗ್ಗೆ ಹೇಳಿದ್ದಾರೆ. ಇನ್ನೊಂದು ಉತ್ತರವನ್ನು ಕೊಡುತ್ತಾ ಅಕ್ಟೋಬರ್ 2009ರಲ್ಲಿ ಪೂರ್ಣಗೊಳಿಸಲಾಗುವುದು. ಅಲ್ಲಿ ಜಾಗವನ್ನು ಬಿಡುವುದಕ್ಕೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಅಲ್ಲಿ ಅಪ್ರೋಚ್ ರೋಡ್ ಮಾಡುವುದಕ್ಕೆ ಜಾಗವನ್ನು ಬಿಡಲಿಲ್ಲ. ಅಲ್ಲಿ ಎಲ್ಲಾ ಜಾಗವನ್ನು ಬಿಟ್ಟಿದ್ದಾರೆ. ಸುಮಾರು ದಿವಸಗಳ ಹಿಂದೆಯೇ ಬಿಟ್ಟಿದ್ದಾರೆ.

ಆದರೆ ಅಲ್ಲಿ ಕೆಲಸವನ್ನು ಮಾಡುತ್ತಿಲ್ಲ. ಅದು ಬೆಂಗಳೂರು–ಮಾಗಡಿಗೆ ಬಹಳ ಮುಖ್ಯವಾದ ಮತ್ತು ಅತ್ಯಾವಶ್ಯಕವಾದ ರಸ್ತೆಯಾಗಿದೆ. ಆದ್ದರಿಂದ ದಯಮಾಡಿ ಇದನ್ನು ಆದಷ್ಟು ಬೇಗನೆ ಮುಗಿಸಿಕೊಡುತ್ತಿರಾ, ಆಗಸ್ಟ್ 2009ರಲ್ಲಿಯೇ ಇದನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಸುಗಮಗೊಳಿಸುತ್ತೀರಾ ಎಂದು ತಮ್ಮ ಮುಖಾಂತರ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇದು ಸಿಂಗಲ್ ಬ್ರಿಡ್ಜ್ ಆಗಿದ್ದು ಹಳೆಯದಾಗಿದೆ. ಸುಮಾರು 100 ವರ್ಷದ ಹಳೆಯ ಬ್ರಿಡ್ಜ್ ಆಗಿದೆ. ನಮ್ಮ ಮಾನ್ಯ ಸದಸ್ಯರಾದಂತಹ ಬಾಲಕೃಷ್ಣರವರು ಎನು ಹೇಳುತ್ತಿದ್ದಾರೆ, ಏಕೆಂದರೆ ಒಂದು ವೆಹಿಕಲ್ ಹೋದರೆ ಮತ್ತೊಂದು ವೆಹಿಕಲ್ ಹೋಗುವುದಕ್ಕಾಗುವುದಿಲ್ಲ. ಬ್ರಿಡ್ಜ್ ಎಲ್ಲವೂ ಕಂಪ್ಲೀಟ್ ಆಗಿದೆ. Only approach road ಆಗಬೇಕು. ಅದೇನು approach road ಆಗುವುದು ಅಲ್ಲಿ ಇನ್ನು 15 ದಿವಸಗಳ ಕೆಲಸವಿದೆ. ದಯಮಾಡಿ ಅಕ್ಟೋಬರ್‌ವರೆಗೆ ಕಾಯುವುದು ಬೇಡ. ಆಗಸ್ಟ್ end ಒಳಗಡೆಯೇ ಆ ಕೆಲಸವನ್ನು ಮುಗಿಸಿಕೊಡುವುದಕ್ಕೆ ಮಾನ್ಯ ಸಚಿವರು ಗಮನವನ್ನು ಹರಿಸಬೇಕೆಂದು ಕೇಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಸೇತುವೆ ನಿರ್ಮಾಣದ ಕಾರ್ಯ ಸಂಪೂರ್ಣವಾಗಿ ಮುಗಿದಿದೆ. ರಸ್ತೆಗಳನ್ನು ನಿರ್ಮಾಣ ಮಾಡಬೇಕಾದಂತಹ ಕೆಲಸದಲ್ಲಿ ನಮಗೆ ಅಲ್ಲಿರಬೇಕಾದಂತಹ ಕೆಲವು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಭೂಮಿ ಹಸ್ತಂತರದ ವಿಳಂಬದಿಂದ ರಸ್ತೆ ನಿರ್ಮಾಣದ ಕಾರ್ಯ ವಿಳಂಬವಾಗಿದೆ. ಆ ಕೆಲಸವನ್ನು ಅತೀ ಶೀಘ್ರದಲ್ಲಿಯೇ ಮುಗಿಸಿಕೊಡುವಂತಹ ವ್ಯವಸ್ಥೆಯನ್ನು ನಾವು ಅವತ್ತಿನ ದಿನಾಂಕವನ್ನು ಗೊತ್ತುಪಡಿಸಿ ಅಕ್ಟೋಬರ್ ಕೊನೆಯೊಳಗಡೆ ಎಂದು ಗೊತ್ತುಪಡಿಸಿದ್ದೆವು. ಅದನ್ನು ಆಗಸ್ಟ್ 15 ರೋಳಗಾಗಿ ಮುಗಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಸೇಡಂ ಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿ ಕುರಿತು

55(369) ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ಸೇಡಂ)

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಅಥವಾ ನಿರ್ವಹಣೆಗೆ ಸರ್ಕಾರ 2007–08 ಮತ್ತು 2008–09ನೇ ಸಾಲಿನಲ್ಲಿ ಮಾಡಿರುವ ಖರ್ಚೆಷ್ಟು?

ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಅಥವಾ ನಿರ್ವಹಣೆಗೆ ಸರ್ಕಾರ 2007–08 ಮತ್ತು 2008–09ನೇ ಸಾಲಿನಲ್ಲಿ ಈ ಕೆಳಕಂಡಂತೆ ಖರ್ಚು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)